ಈ ಯೋಜನೆಯನ್ನು ಇಷ್ಟು ದಿವಸದಲ್ಲಿ ಪೂರ್ಣ ಮಾಡುತ್ತೇವೆಂದು ಸ್ಪೆಸಿಫಿಕ್ಕಾಗಿ ಹೇಳಿ. ಪದೇ ಪದೇ ಪ್ರಶ್ನೆ ಕೇಳುವುದು ಉಚಿತ ಅಲ್ಲವೆಂದು ನಾನು ಭಾವಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಗೆ ಇದು ಬರುವುದಿಲ್ಲ. ಆರ್‌ಡಿಪಿಆರ್ ಇಲಾಖೆಗೆ ಬರುವುದು. ಜಿಲ್ಲಾ ಪಂಚಾಯಿತಿಯವರು ಯಾವ ಗಂಗಾ ಕಲ್ಯಾಣ ಯೋಜನೆ ಪ್ರಾರಂಭ ಮಾಡಿದ್ದಾರೆ ಅದನ್ನು ಪೂರೈಸುವ ಜವಾಬ್ದಾರಿ ಅವರಿಗೆ ಇದೆ. ವಿಶೇಷ ಘಟಕ ಯೋಜನೆ ಅವರಲ್ಲಿ ಇದೆ. ಸಣ್ಣ ನೀರಾವರಿಗೆ ಅದರಲ್ಲಿ ಹಣವನ್ನು ಇಟ್ಟುಕೊಂಡಿದ್ದೇವೆ, ಆ ಹಣವನ್ನು ಬಳಸಿಕೊಂಡು ಆ ಕೆಲಸ ಪೂರೈಸಬೇಕಾದ ಜವಾಬ್ದಾರಿ ಅವರಿಗೆ ಇದೆ. ಅವರ ಮೂಲಾಂತರ ಈ ಕೆಲಸವನ್ನು ನಾವು ಮಾಡಿಸಬೇಕಾಗುತ್ತದೆ. ಆ ಕೆಲಸವನ್ನು ಅವರು ಮಾಡದೇ ಇದ್ದರೆ ವಿಶೇಷ ಘಟಕ ಯೋಜನೆಯಲ್ಲಿ ಬಳಸಿಕೊಳ್ಳಲಿ ಎಂದು ನಾನು ಆದೇಶ ಕೊಡುತ್ತೇನೆ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಕೊಳವೆ ಬಾವಿ ನಿರ್ಮಾಣ.

218(2565)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಂಗಾ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗೆ ಎಷ್ಟು ಕೊಳವೆ ಬಾವಿ ಯೋಜನೆಗಳನ್ನು 2000-2001ನೇ ಸಾಲಿನಲ್ಲಿ ಮಂಜೂರಾತಿ ಮಾಡಿದೆ; ಮತ್ತು ಇದಕ್ಕೆ ಖರ್ಚಾಗಿರುವ ಹಣ ಎಷ್ಟು?

ಆ) 2001-2002ನೇ ಸಾಲಿನಲ್ಲಿ ಎಷ್ಟು ಫಲಾನುಭವಿಗಳಿಗೆ ಈ ಯೋಜನೆಯನ್ನು ಮಂಜೂರು ಮಾಡಲಾಗುವುದು, ಇದಕ್ಕಾಗಿ ಸರ್ಕಾರ ಇಟ್ಟಿರುವ ಹಣವೆಷ್ಟು? ಜಿಲ್ಲಾವಾರು ಮಾಹಿತಿಯನ್ನು ನೀಡುವುದು;

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ 2000-2001ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಹಾಗೂ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯಡಿ ಈ ಕೆಳಗೆ ತಿಳಿಸಿರುವಂತೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಯೋಜನೆ	ಕೊರೆದ ಕೊಳವೆ ಬಾವಿಗಳ ಸಂಖ್ಯೆ			ಖರ್ಚಾಗಿರುವ ಮೊತ್ತ	
	ಪ. ಜಾತಿ	ಪ. ವರ್ಗ	ಒಟ್ಟು	ಪ. ಜಾತಿ	ಪ. ವರ್ಗ
ಅ) ಗಂಗಾ ಕಲ್ಯಾಣ ಯೋಜನೆ	593	204	797	2409.92	329.86
ಆ) ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ	624	194	818	481.68	48.81
ಒಟ್ಟು	1217	398	1615	2891.60	378.67

ಆ) 2001-02ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆ ಹಾಗೂ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಈ ಕೆಳಗೆ ತಿಳಿಸಿರುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ- IIರಲ್ಲಿ ಲಗತ್ತಿಸಿಲಾಗಿದೆ.

ಯೋಜನೆ	ಕೊರೆಯುವ ಕೊಳವೆ ಬಾವಿಗಳ ಸಂಖ್ಯೆ			ಸರ್ಕಾರದಿಂದ ಇಟ್ಟಿರುವ ಅನುದಾನ		
	ಪ. ಜಾತಿ	ಪ. ವರ್ಗ	ಒಟ್ಟು	ಪ. ಜಾತಿ	ಪ. ವರ್ಗ	ಒಟ್ಟು
ಅ) ಗಂಗಾ ಕಲ್ಯಾಣ ಯೋಜನೆ	296	134	430	375.00	170.00	545.00
ಆ) ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ	577	262	839	375.00	170.00	545.00
ಒಟ್ಟು	873	396	1269	750.00	340.00	1090.00

KARNATAKA SCHEDULED CASTES AND SCHEDULED TRIBES DEVELOPMENT CORPORATION, BANGALORE

ANNEXURE-I

ANNUAL ACTION PLAN FOR THE YEAR 2001-2002 COMMUNITY IRRIGATION BOREWELLS UNDER GANGAKALYANA SCHEME

(Rs. in lakhs)

Sl. No.	Name of the District	PHYSICAL			FINANCIAL		
		SC	ST	TOTAL	SC	ST	TOTAL
1	Bangalore (U)	20	04	24	25.30	5.06	30.36
2	Bangalore (R)	20	04	24	25.30	5.06	30.36
3	Kolar	22	10	32	27.03	12.65	40.48
4	Tumkur	16	08	24	20.24	10.12	30.36
5	Shimoga	10	02	12	12.65	2.53	15.18
6	Chitradurga	11	14	25	15.18	17.71	32.89
7	Davanagere	12	08	20	15.18	10.12	25.30
8	Mysore	15	04	19	17.71	5.06	22.77
9	C.R.Nagar	08	04	12	10.12	5.06	15.18
10	Mandya	10	02	12	12.65	2.53	15.18
11	Chikmagalur	08	02	10	10.12	2.53	12.65
12	Hassan	11	02	13	15.18	2.53	17.71
13	Mangalore	04	04	08	05.06	05.06	10.12
14	Udupi	03	03	06	03.59	03.59	07.18
15	Kodagu	02	03	05	02.53	03.59	06.12
16	Dharwad	05	02	07	06.12	02.53	08.65

17	Gadag	08	02	10	10.12	02.53	12.65
18	Haveri	10	04	14	12.65	05.08	17.71
19	Belgaum	16	06	22	20.24	07.59	27.83
20	Karwar	04	02	06	05.06	02.53	07.59
21	Bijapur	11	10	21	15.18	12.65	27.83
22	Bagalkote	10	02	12	12.65	2.53	15.18
23	Gulbarga	24	06	30	30.36	7.59	37.95
24	Bidar	10	06	16	12.65	7.59	20.24
25	Bellary	10	08	18	12.65	10.12	22.77
26	Raichur	10	08	18	12.65	10.12	22.77
27	Koppal	06	04	10	7.59	5.06	12.65
	Total	296	134	430	375.00	170.00	545.00

KARNATAKA SCHEDULED CASTES AND SCHEDULED TRIBES DEVELOPMENT CORPORATION, BANGALORE

ANNEXURE-II

ANNUAL ACTION PLAN FOR THE YEAR 2001-2002 INDIVIDUAL IRRIGATION BOREWELL SCHEME

(Rs. in lakhs)

Sl. No.	Name of the District	PHYSICAL			FINANCIAL		
		SC	ST	TOTAL	SC	ST	TOTAL
01	Bangalore (U)	33	06	39	21.45	3.90	25.35
02	Bangalore (R)	27	07	34	17.55	4.55	22.10
03	Kolar	47	21	68	30.55	13.65	44.20
04	Tumkur	34	23	67	22.10	14.95	37.05
05	Shimoga	20	04	24	13.00	2.60	15.60
06	Chitradurga	24	31	55	15.60	20.15	35.75
07	Davanagere	25	22	47	16.25	14.30	30.55
08	Mysore	33	09	42	21.45	5.85	27.30
09	C.R.Nagar	16	04	20	10.40	2.60	13.00
10	Mandya	19	02	21	12.35	1.30	13.65
11	Chikmagalur	15	04	19	9.75	2.60	12.35
12	Hassan	23	02	25	14.95	1.30	16.25
13	Mangalore	08	09	17	5.20	5.85	11.05
14	Udupi	05	06	11	3.25	3.90	7.15
15	Kodagu	04	06	10	2.60	3.90	6.50
16	Dharwad	04	02	06	2.60	1.30	3.90

17	Gadag	09	03	12	5.85	1.95	7.80
18	Haveri	13	08	21	8.45	5.20	13.65
19	Belgaum	34	12	46	22.10	7.80	29.90
20	Karwar	07	01	08	4.55	0.65	5.20
21	Bijapur	24	02	26	15.60	1.30	16.90
22	Bagalkote	17	04	21	11.05	2.60	13.65
23	Gulbarga	55	15	70	35.75	9.75	45.50
24	Bidar	22	15	37	14.30	9.75	24.05
25	Bellary	26	21	47	16.90	13.65	30.55
26	Raichur	21	16	37	13.65	10.40	24.05
27	Koppal	12	07	19	7.80	4.55	12.35
	Total	577	262	839	375.05	170.30	545.35

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು 2000-01ನೇ ಸಾಲಿನಲ್ಲಿ ಒಟ್ಟು ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 1,615 ಕೊಳವೆ ಬಾವಿಗಳನ್ನು ತೋಡಿದ್ದೇವೆ ಎಂದು ತೋರಿಸಿದ್ದಾರೆ. ಈ ವರ್ಷ ಎಷ್ಟು ಕೊಳವೆ ಬಾವಿಗಳನ್ನು ತೋಡುವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಕೇಳಿದ್ದೇನೆ, 2001-02ನೇ ಸಾಲಿಗೆ 1,269 ಬಾವಿಗಳನ್ನು ತೋಡಲಾಗುವುದು ಎಂದು ಹೇಳಿದ್ದಾರೆ. ಇದು ಕಳೆದ ವರ್ಷಕ್ಕಿಂತ ಕಡಿಮೆ ಟಾರ್ಗೆಟ್ ಆಗುತ್ತದೆ ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಹೋದ ವರ್ಷ 1,615 ಬಾವಿಗಳನ್ನು ತೋಡಿದ್ದೀರಿ, ಈ ವರ್ಷ 1,269 ಮಾಡಿದ್ದೀರಿ. ಇದು ಮೊದಲನೆಯದು. ತಾವು ಹೇಳಿದ ಹಾಗೆ ಇಡೀ ತಾಲ್ಲೂಕಿನಲ್ಲಿ ನಾವು ಕೊನೆ ಪಕ್ಷ 20-25 ಜನರಿಗಾದರೂ, ಹೋಬಳಿಗೆ ನಾಲ್ಕೈದು ಜನರಿಗೆ ಎರಡರಿಂದ ಮೂರು ಎಕರೆ ಜಮೀನು ಇರುವವರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಅದರಂತೆ ಬೇಡಿಕೆ ಕೂಡ ಇದೆ. 10 ವರ್ಷಗಳ ಹಿಂದೆ ಇದರ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ತಿಳುವಳಿಕೆ ಇರಲಿಲ್ಲ. ಈಗ ತಿಳುವಳಿಕೆ ಬಂದಿದೆ. ಅವರೂ ಕೂಡ ಬಂದು ನಿಂತಿದ್ದಾರೆ. ಇದರ ಬಗ್ಗೆ ಮೊನ್ನೆ ಇದರ ಬಗ್ಗೆ ಚರ್ಚೆಯಾದ ಸಂದರ್ಭದಲ್ಲಿ ನಮ್ಮ ನಾಯಕರಾದ ಶ್ರೀಮಾನ್ ಸೋಮಶೇಖರ್‌ರವರು ಕೊನೆ ಪಕ್ಷ ಒಂದು ತಾಲ್ಲೂಕಿನಲ್ಲಿ 100 ಬಾವಿಗಳನ್ನಾದರೂ ತೆಗೆಯಬೇಕೆಂದು ಹೇಳಿದ್ದರು. ಇದರ ಜೊತೆಗೆ ಹಿಂದುಳಿದ ವರ್ಗದವರಿಗೆ ಕೂಡ ಆಗಬೇಕೆಂದು ಒತ್ತಾಯ ಮಾಡಿದ್ದೆವು. ಆದ್ದರಿಂದ ಈ ವರ್ಷ ತಮ್ಮ ಉತ್ತರದ ಪ್ರಕಾರವಾಗಿ ಕಳೆದ ವರ್ಷಕ್ಕಿಂತ ಕಡಿಮೆ ಇದೆ. ಹೀಗೆ ವ್ಯತ್ಯಾಸ ಆಗಿರುವುದಕ್ಕೆ ಕಾರಣವೇನು? ಎರಡನೇ ಪ್ರಶ್ನೆ. ಇದಕ್ಕೆ ಯಾವುದೇ ನಿಬಂಧನೆ ಇರಬಾರದು. ಕ್ಯೂನಲ್ಲಿ ಬಂದು ಪವರ್ ಕನೆಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಿದರೆ ಅದು ಆಗುವುದಿಲ್ಲ. ಆದ್ಯತೆ ಮೇಲೆ ಗಂಗಾ ಕಲ್ಯಾಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಾಗೂ ಹಿಂದುಳಿದ ವರ್ಗದವರಿಗೆ 100 ರಿಂದ 50 ಬಾವಿಗಳನ್ನು ಏನು ಕೊಡಬೇಕೆಂದಿದ್ದಾರೆ ಅವುಗಳಿಗೆ ತತ್‌ಕ್ಷಣ ಕೆಪಿಟಿಸಿಎಲ್‌ನಿಂದ ಕನೆಕ್ಷನ್ ಕೊಡುವುದಕ್ಕೆ ಸಾಧ್ಯವೇ?

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಆಯವ್ಯಯದಲ್ಲಿ ಬಂದಿರತಕ್ಕಂತಹ ಹಣವನ್ನು ಮಾತ್ರ ನಾನು ಇಲ್ಲಿ ತೋರಿಸಿದ್ದೇನೆ. ನಮ್ಮ ಆಯವ್ಯಯದಿಂದ ನಿಗಮಕ್ಕೆ ಏನು ಹಣ ಕೊಟ್ಟಿದ್ದಾರೆ ಅದಕ್ಕೆ ಮಾತ್ರ ಸೀಮಿತವಾಗಿದೆ. ಇದರ ಜೊತೆಗೆ ನಾನು ಹಿಂದೆ ತಂದಿಡಹೇಳಿದ್ದೇನೆ, ಮೊನ್ನೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಿದ್ದೇನೆ. ಕನಿಷ್ಟ ಒಂದು ಶಾಸನ ಸಭಾ ಕ್ಷೇತ್ರದಲ್ಲಿ 26 ಲಕ್ಷ ರೂಪಾಯಿ ಕೊಡಬೇಕೆಂದು ಇದ್ದರೂ ಪೂಲ್ ಅಮೌಂಟ್‌ನಲ್ಲಿ ಸ್ವಲ್ಪ ಹಣ ತೆಗೆದುಕೊಂಡು, ಕೇಂದ್ರ ಸರ್ಕಾರದ ಹಣಕಾಸಿನ ಅಭಿವೃದ್ಧಿ ನಿಗಮ ಏನು ಇದೆ ಅದನ್ನೂ ಸೇರಿಸಿಕೊಂಡು ಒಟ್ಟು ನಮ್ಮ ರಾಜ್ಯಕ್ಕೆ ಕನಿಷ್ಟ ಐದು ಸಾವಿರ ಗಂಗಾ ಕಲ್ಯಾಣ ಮಾಡಬೇಕೆಂದು ಇದ್ದೇವೆ. 200-200 ಎಂದರೂ ರೂರಲ್ ಕಾನ್‌ಸ್ಟಿಟ್ಯೂಯೆನ್ಸಿಗೆ 400 ಆಗುತ್ತದೆ. ಇನ್ನು ಸಾವಿರ ಉಳಿಯುತ್ತವೆ. ಟೈಬಲ್

ಏರಿಯಾಗಳು ಇರುವ ಕೆಲವು ಪ್ರದೇಶ ಇದೆ. ನಾಗರಹೊಳೆ ಇಂತಹ ಕಡೆ ಪುನರ್ವಸತಿ ಮಾಡುವುದು ಇದೆ. ಅವರಿಗೆ ಸ್ವಲ್ಪ ಗುಂಪು ಗುಂಪು ಜಮೀನು ಸಿಗತಕ್ಕಂತಹ ಸಂದರ್ಭ ಇರುವುದರಿಂದ ಅವರಿಗೆ ಪುನರ್ವಸತಿ ಮಾಡುವುದಕ್ಕೋಸ್ಕರ 500 ರಿಂದ ಸಾವಿರ ರೂಪಾಯಿ ಇಟ್ಟುಕೊಂಡಿದ್ದೇವೆ. ಆ ಹಣವನ್ನು ಇಲ್ಲಿ ಒದಗಿಸಿಕೊಡುತ್ತೇವೆಂದು ಖಂಡಿತವಾಗಿ ಭರವಸೆ ಕೊಡುತ್ತೇವೆ. ಈ ಸಾರಿ ವಿದ್ಯುಚ್ಛಕ್ತಿಯಲ್ಲಿ ಒಂದು ತೊಂದರೆಯಾಗಿತ್ತು. 65,000 ರೂಪಾಯಿ ಯೂನಿಟ್ ಕಾಸ್ಟ್ ಮಾಡಿದ್ದೇವೆ. ಕೆಲವು ಕೊರೆಯುವುದಕ್ಕೆ ಆಗಲಿಲ್ಲ. ಫಲಾನುಭವಿಗಳು ಎರಡೂವರೆ ಸಾವಿರ ರೂಪಾಯಿ ವಿದ್ಯುಚ್ಛಕ್ತಿ ಬಾಬ್ತು ಕಟ್ಟ ಬೇಕಾಗಿತ್ತು. ತೀರಾ ಬಡವರು ಯಾರು ಇದ್ದಾರೆ, ಅವರು ಎರಡೂವರೆ ಸಾವಿರ ರೂಪಾಯಿ ಕೂಡುವುದಕ್ಕಾಗುವುದಿಲ್ಲ. ಅರ್ಜಿ ಹಿಡಿದುಕೊಂಡು ತಿರುಗುವವರು ಕಟ್ಟ ಬಿಡುತ್ತಾರೆ. ಅದಕ್ಕೆ ನಾವೇ ಪೂರ್ತಿ ಕಟ್ಟಬೇಕು, ಒಟ್ಟು ವಿದ್ಯುಚ್ಛಕ್ತಿ ಎಲ್ಲಾ ಸೇರಿ, 65,000 ಕ್ಕಿಂತ ಜಾಸ್ತಿಯಾಗುವುದಾದರೆ ಆ ಜಾಸ್ತಿ ಹಣವನ್ನು ಲೋನಾಗಿ ಪರಿವರ್ತನೆ ಮಾಡಿ ಪೂರ್ತಿ ಹಣವನ್ನು ನೀವೇ ಕಟ್ಟಿ ಅದನ್ನು ಡಿಲ್ಲ್ ಮಾಡಿ ಮತ್ತು ಎನರ್ಜೈಸ್ ಮಾಡಿ ಎಂದು ಹೇಳಿದ್ದೇವೆ. ವಿದ್ಯುಚ್ಛಕ್ತಿ ಕೊಡುವ ವಿಚಾರದಲ್ಲಿ ಈಗ ನಾವು ಪದೇಪದೇ ವಿದ್ಯುಚ್ಛಕ್ತಿ ಮಂಡಳಿಯವರ ಜೊತೆ ಸಂಪರ್ಕ ಇಟ್ಟುಕೊಂಡು ಆಯಾ ಕಾಲಕ್ಕೆ ಮಾಡುತ್ತೇವೆ. ಮೆಟೀರಿಯಲ್ ಇಲ್ಲದ ಕಾರಣದಿಂದ ಅವರು ಸ್ವಲ್ಪ ತೊಂದರೆ ಕೊಡುತ್ತಾರೆ. ಆದರೂ ಕೂಡ ಅದನ್ನು ಪರ್ಸ್ಯೂ ಮಾಡಿ ವಿದ್ಯುಚ್ಛಕ್ತಿಯನ್ನು ಆಯಾ ವರ್ಷದಲ್ಲಿಯೇ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ.ಜಿ.ಆರ್.ಸಿಂಧ್ಯ: ಎಸ್‌ಸಿ/ಎಸ್‌ಟಿ ಕಾರ್ಪೊರೇಷನ್‌ನಿಂದ ಕೋಟ್ಯರತಕ್ಕಂತಹ ಹಣ ಮಾತ್ರ ಎಂದು ಹೇಳಿದ್ದೀರಿ. ಎಸ್‌ಇಪಿಯಿಂದ ಪೂಲ್ ಆಗತಕ್ಕಂಥದ್ದಕ್ಕೆ ನೀವು ಈ ವರ್ಷ ಖಂಡಿತ ಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ: ಇದಕ್ಕೆ ಬಜೆಟ್‌ನಲ್ಲಿ ಎಷ್ಟು ಕೊಟ್ಟಿದ್ದಾರೆ, ಆ ಹಣಕ್ಕೆ ಒಂದು ಕಾರ್ಯಕ್ರಮ ಮಾಡಿದ್ದೇವೆ. ಉಳಿದ 5,000 ಕೊಡುವುದಕ್ಕೆ ಪೂಲ್ ಅಮೌಂಟ್ ಬರುತ್ತದೆ. ಪೂಲ್ ಅಮೌಂಟ್ ಜೊತೆಗೆ ನ್ಯಾಷನಲ್ ಫೈನಾನ್ಸ್ ಕಾರ್ಪೊರೇಷನ್‌ನಿಂದ ಕೂಡ ಹಣ ಬರುತ್ತದೆ.

ಶ್ರೀ ಟಿ.ಜಿ.ಆರ್.ಸಿಂಧ್ಯ: ಈಗ ಕೆಪಿಟಿಸಿಎಲ್‌ನಿಂದ ಒಂದು ಆರ್ಡರನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ಪವರ್ ಡಿಪಾರ್ಟ್‌ಮೆಂಟ್‌ಗೆ ಕೊಡಬೇಕಾಗುತ್ತದೆ. ಏನೆಂದು ಹೇಳಿದರೆ ತಮಗೆ ಗೊತ್ತಿರುವ ಹಾಗೆ, ಬಾವಿ ತೋಡಿದರೆ ತಾವು ಸಾಲವನ್ನು ಕೊಡುತ್ತೀರಿ. ಅಲ್ಲಿ ಒಂದು ವರ್ಷ ಅಥವಾ ಆರು ತಿಂಗಳಿಗೆ ನೀರು ಕಡಿಮೆ ಆಗುತ್ತದೆ, ಮತ್ತೆ ಕೆಪಿಟಿಸಿಎಲ್‌ನವರು ಕನೆಕ್ಷನ್ ಕೊಡಲಿಲ್ಲ ಎಂದು ಹೇಳಿದಾಗ, ಫಲಾನುಭವಿ ಕೆ.ಪಿ.ಟಿ.ಸಿ.ಎಲ್.ನಿಂದ ಕರೆಂಟ್ ಕನೆಕ್ಷನ್ ತೆಗೆದುಕೊಳ್ಳುವುದಕ್ಕೂ ಆಗದೇ ಸಾಲವೂ ಕೂಡ ತನ್ನ ತಲೆಯ ಮೇಲೆಯೇ ಇಟ್ಟುಕೊಂಡು ಬೋರ್‌ವೆಲ್ ಕೂಡ ಫೇಲ್ಯೂರ್

ಆಗಿರುವಂತಹ ಪ್ರಸಂಗವೇ ಜಾಸ್ತಿಯಾಗಿದೆ. ಆದುದರಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಅಡತಡೆ ಇಲ್ಲದೆ ವಿದ್ಯುತ್ ಸರಬರಾಜು ಮಾಡಲು ಮತ್ತು ವಿದ್ಯುತ್ ಸಂಪರ್ಕ ಬೇಗನೆ ಒದಗಿಸುವಂತೆ ಸರ್ಕಾರಿ ಆಜ್ಞೆಯನ್ನು ತಕ್ಷಣವೇ ಹೊರಡಿಸುವ ಆಲೋಚನೆ ಸರ್ಕಾರಕ್ಕಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸಿಂಧ್ಯಾರವರ ಸಲಹೆ ಉತ್ತಮವಾಗಿದೆ. ಏಕೆಂದರೆ ಪಂಪ್‌ಸೆಟ್ ಹಾಕಿದ ಮೇಲೆ ಅದು ಒಂದುವರೆ ವೇಸ್ಟ್ ಆದರೂ ಕೂಡ ವ್ಯರ್ಥವೇ ಆಗುತ್ತದೆ. ನೀರು ಅತ್ಯಂತ ಉಪಯುಕ್ತ ಹಾಗೂ ಫಲಪ್ರದವಾದುದೇ ಆಗಿರುತ್ತದೆ. ಆದುದರಿಂದ ಸಿಂಧ್ಯಾರವರು ಹೇಳಿದ ಹಾಗೆ ವಿಶೇಷವಾಗಿ ಗಂಗಾ ಕಲ್ಯಾಣ ಯೋಜನೆಗೆ ಯಾವ ಅಡತಡೆಯೂ ಇಲ್ಲದೇ ನಿಗದಿತ ವೇಳೆಯಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸರ್ಕಾರಿ ಆಜ್ಞೆಯನ್ನು ಹೊರಡಿಸುವುದಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರದಲ್ಲಿ 2000-01ನೇ ಸಾಲಿನಲ್ಲಿ ಒಟ್ಟು 27 ಜಿಲ್ಲೆಗಳಲ್ಲಿ ಬೋರ್‌ವೆಲ್‌ಗಾಗಿ 5 ಕೋಟಿ 45 ಲಕ್ಷ ರೂಪಾಯಿಗಳು ವಿರ್ಚಾಗಿದೆ ಎಂದೂ ಮತ್ತು ಮುಂದಿನ ಸಾಲಿನಲ್ಲಿ ಐದು ಸಾವಿರ ಫಲಾನುಭವಿಗಳನ್ನು ಗುರುತಿಸಲಾಗುವುದೆಂದೂ ಹೇಳಿದ್ದಾರೆ. ಗಂಗಾ ಕಲ್ಯಾಣ ಯೋಜನೆಯ ಅನುಕೂಲ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಸಿಗುತ್ತದೆ. ಇಲ್ಲೇನಾಗಿದೆಯೆಂದರೆ ಮೊದಲು ಒಂದು ಕಡೆ ಬೋರ್ ತೆಗೆದಾಗ ನೀರು ಬರಲಿಲ್ಲವೆಂದರೆ ಜಿಯಾಲಜಿಸ್ಟ್ ಹೊರಟು ಹೋಗುತ್ತಾರೆ. ಆದುದರಿಂದ ನಾನು ಸಲಹೆ ಮಾಡುವುದೇನೆಂದರೆ ಕಡೇ ಪಕ್ಷ ಎರಡು ಕಡೆ ಪಾಯಿಂಟ್ ಮಾಡಿ ನೀರು ಸಿಗುವವರೆಗೂ ಕೊರೆಯಬೇಕು ಎಂದು ಸರ್ಕಾರ ಆಜ್ಞೆ ಮಾಡಬೇಕು. ಇನ್ನು ಎರಡನೆಯದಾಗಿ ಆದಷ್ಟು ಜಾಗ್ರತೆ ಕೆ.ಪಿ.ಟಿ.ಸಿ.ಎಲ್.ನಿಂದ ವಿದ್ಯುತ್ ಸಂಪರ್ಕವನ್ನು ಕೊಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗ): ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯ ಚಿಕ್ಕೋಡಿ ಮತ್ತು ಅಥಣಿ ತಾಲ್ಲೂಕುಗಳನ್ನು ಡಾರ್ಕ್ ಏರಿಯಾ ಎಂದು ಮಾಡಿದ್ದಾರೆ. ಇದೇ ರೀತಿ ಇನ್ನೆರಡು ತಾಲ್ಲೂಕುಗಳನ್ನು ಗ್ರೇ ಏರಿಯಾ ಎಂದು ಡಿಕ್ಲೇರ್ ಮಾಡಿದ್ದಾರೆ. ಇವೊತ್ತು ಈ ಏರಿಯಾಗಳಲ್ಲಿರುವ ಗಂಗಾ ಕಲ್ಯಾಣ ಯೋಜನೆಗೆ ಕೆ.ಇ.ಬಿ.ಯವರು ವಿದ್ಯುತ್ ಸಂಪರ್ಕವನ್ನು ಕೊಡುತ್ತಿಲ್ಲ. 31ನೇ ಮಾರ್ಚ್‌ನಲ್ಲಿ ಸರ್ಕಾರ ಒಂದು ನಿಯಮವನ್ನು ಮಾಡಿ ಈ ತಾತ್ಕಾಲಿಕ ಯೋಜನೆಯ ಕಳಗಡೆ ಗ್ರೇ ಮತ್ತು ಡಾರ್ಕ್ ಏರಿಯಾಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡಬಾರದೆಂದು ಮಾಡಿದ್ದಾರೆ. ಈ ಹಿನ್ನೆಲೆಯಿಂದಲೇ ಚಿಕ್ಕೋಡಿ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆ ಮಂಜೂರಾಗಿದ್ದರೂ ಕೂಡ ವಿದ್ಯುತ್ ಸಂಪರ್ಕ ಇನ್ನೂ ಕೊಟ್ಟಿಲ್ಲ. ಆದುದರಿಂದ ಗ್ರೇ

ಹಾಗೂ ಡಾರ್ಕ್ ಏರಿಯಾಗಳಲ್ಲಿನ ಗಂಗಾ ಕಲ್ಯಾಣ ಯೋಜನೆಗೆ ವಿದ್ಯುತ್ ಸಂಪರ್ಕ ಕೊಡಿಸುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಈ ವರ್ಷದ ಟಾರ್ಗೆಟ್ 1269 ಆಗಿದ್ದು ಅದು ಕಡಿಮೆ ಎಂದು ಹೇಳಿ ಹೊಸದಾಗಿ ಐದು ಸಾವಿರ ಫಲಾನುಭವಿಗಳನ್ನು ಗಂಗಾ ಕಲ್ಯಾಣ ಯೋಜನೆಯಡಿ ಸೇರಿಸುತ್ತೇವೆಂದು ಹೇಳಿದ್ದಾರೆ. ನಾನು ಕೇಳುವುದೇನೆಂದರೆ ಈಗೇನು ಐದು ಸಾವಿರ ಎಂದು ಹೇಳಿದ್ದಾರೆ ಇದರೊಳಗೇ 1269 ಸೇರಿದೆಯೋ ಅಥವಾ ಅದನ್ನು ಬಿಟ್ಟು ಐದು ಸಾವಿರ ಬೇರೆಯೇ ಆಗಿದೆಯೋ ಎಂಬ ಬಗ್ಗೆ ಹೇಳಬೇಕು. ಇದೊಂದೇ ಬಡವರಿಗೆ ಮೀನಿಂಗ್‌ಫುಲ್ ರಿಹ್ಯಾಬಿಲಿಟೇಷನ್ ಎಂಬುದಾಗಿ ನಾನು ಅನೇಕ ಬಾರಿ ಹಿಂದೆ ಹೇಳಿದ್ದೇನೆ. ಶಿಕ್ಷಣ, ವಸತಿ ಮತ್ತು ನೀರಾವರಿ. ನಾವು ಶಿಕ್ಷಣದ ವಿಚಾರಕ್ಕೆ ಬಂದಾಗ ಹಾಸ್ಟೆಲ್‌ಗಳನ್ನು ಈ ವರ್ಗದವರಿಗಾಗಿ ಹೆಚ್ಚು ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದೀರಿ. ಇನ್ನು ನೀರಾವರಿಗೆ ಐದು ಕೋಟಿ ರೂಪಾಯಿಗಳನ್ನು ಈ ಬಾರಿ ಕೊಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಬೇರೆ ಬೇರೆ ಕಾರ್ಯಕ್ರಮಗಳಿಗೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕ್‌ನಿಂದ, ಹುಡ್ಕೋದಿಂದ ತರುತ್ತಿದ್ದೀರಿ. ನನ್ನ ಸಲಹೆಯೆಂದರೆ ಸರ್ಕಾರ ಹಣ ಒದಗಿಸಲು ಆಗದಿದ್ದರೆ, ನಬಾರ್ಡ್‌ನಿಂದ 50 ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಸಾಲ ತಂದು ಇನ್ನು ಮೂರು ವರ್ಷದೊಳಗೆ ಅರ್ಹ ಎಸ್.ಸಿ.ಎಸ್.ಟಿ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯ ಮುಖಾಂತರ ನೀರಾವರಿ ಸೌಲಭ್ಯವನ್ನು ಒದಗಿಸುತ್ತೇವೆ ಎನ್ನುವ ಮಾತನ್ನು ತಾವು ಹೇಳಬೇಕು. ನೀವು ಬೇಕಾದರೆ ಸಾಲವನ್ನು ಇನ್ನೈದು ವರ್ಷದಲ್ಲಿ ತೀರಿಸಿ. ಈ ಕಾರ್ಯಕ್ರಮ ಜಾರಿಗೆ ತಂದರೆ ನಿಮ್ಮ ಸರ್ಕಾರಕ್ಕೇ ಕ್ರೆಡಿಟ್ ಬರುತ್ತದೆ. ಈ ಕೆಲಸ ಮಾಡುತ್ತೀರಾ ಎಂಬ ಬಗ್ಗೆ ತಾವು ಹೇಳಬೇಕು. ಇನ್ನು ಎರಡನೆಯದಾಗಿ ಗಂಗಾ ಕಲ್ಯಾಣ ಯೋಜನೆಯನ್ನು ತಾವೇನು ಮಂಜೂರಾತಿ ಮಾಡುತ್ತೀರಿ ಆಗಲೇ ಕೆ.ಪಿ.ಟಿ.ಸಿ.ಎಲ್.ಗೆ ಈ ಯೋಜನೆಗೆ ಬೇಕಾದ ಹಣವನ್ನು ವಿದ್ಯುತ್ ಸಂಪರ್ಕಕ್ಕೋಸ್ಕರ ತುಂಬುವ ವ್ಯವಸ್ಥೆ ಆಗಬೇಕು. ಈ ರೀತಿಯಲ್ಲಿ ಅಡ್ವಾನ್ಸ್ ಹಣ ಕಟ್ಟಿದ್ದರೆ ಬೋರ್‌ವೆಲ್ ತೋಡಿದರೂ ಕೂಡ ವಿದ್ಯುತ್ ಸಂಪರ್ಕಕ್ಕಾಗಿ ಕಾಯಬೇಕಾದ ಸ್ಥಿತಿ ಬರುತ್ತದೆ. ಆದುದರಿಂದ ಅಡ್ವಾನ್ಸ್ ಆಗಿಯೇ ಕೆ.ಪಿ.ಟಿ.ಸಿ.ಎಲ್.ಗೆ ಹಣ ತುಂಬುವ ವ್ಯವಸ್ಥೆ ಮಾಡುತ್ತೀರಾ ಎಂಬ ಬಗ್ಗೆ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಮೊದಲು ನಾನು ಮಾನ್ಯ ಸದಸ್ಯರಾದ ಅಂಜನಾಮೂರ್ತಿಯವರ ಪ್ರಶ್ನೆಗೆ ಉತ್ತರಿಸುವುದೇನೆಂದರೆ ಅವರು ಸಲಹೆ ಕೊಟ್ಟು ಎರಡು ಪಾಯಿಂಟ್‌ಗಳಲ್ಲಿ ಬೋರ್‌ವೆಲ್ ತೋಡುವ ಬಗ್ಗೆ ಹೇಳಿದ್ದಾರೆ. ಪ್ರತಿ ಶಾಸಕರನ್ನೊಳಗೊಂಡ ಒಂದು ಸಮಿತಿ ಮಾಡಿ ಅದಕ್ಕೆ ಅವರೇ ಅಧ್ಯಕ್ಷರಾಗಿರುವಂತೆ ರಚನೆ ಮಾಡಲಾಗಿದೆ. ಯುನಿಟ್ ಕಾಸ್ಟ್ 65 ಸಾವಿರಕ್ಕಿಂತ ಜಾಸ್ತಿಯಾಗಿದೆ. ಏಕೆಂದರೆ 300 ಅಡಿಗೆ ನೀರು ಬರದಿದ್ದರೆ 400 ಅಡಿಯವರೆಗೂ ಹೋಗಬೇಕಾದ್ದರಿಂದ ಜಾಸ್ತಿ ದುಡ್ಡು

ಖರ್ಚಾಗುತ್ತದೆ. ಆ ಹೆಚ್ಚಿನ ಖರ್ಚನ್ನೇ ನಾನು ಸಾಲವನ್ನಾಗಿ ಪರಿವರ್ತನೆ ಮಾಡುತ್ತಿದ್ದೇನೆ. ಆದರೆ ಇಲ್ಲಿ 400 ಅಡಿ ಬೋರ್‌ವೆಲ್‌ಗಳಲ್ಲೂ ನೀರು ಬರದಿದ್ದರೆ ಏನು ಮಾಡಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಜಿಯಾಲಜಿಸ್ಟ್‌ನ್ನು ನಾವು ನಂಬಲೇ ಬೇಕಾಗುತ್ತದೆ. ಅವರು ಹೇಳಿದ್ದನ್ನು ನಾವು ಕೇಳಲೇ ಬೇಕಾಗುತ್ತದೆ. ಮಾನ್ಯ ಸದಸ್ಯರಾದ ಅಂಜನಾಮೂರ್ತಿಯವರು ಸ್ವಲ್ಪ ಎಕ್ಸಾಜರೇಟ್ ಮಾಡಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್ ತೆಗೆದ ಮೇಲೂ ನೀರು ಬರದೇ ಹಾಳಾಗಿದೆ ಎಂಬ ಬಗ್ಗೆ ನಿಖರವಾಗಿ ಹೇಳಿದರೆ ಸ್ವತಃ ನಾನೇ ಹೋಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಅಂಜನಾಮೂರ್ತಿ: ಮಾಗಡಿ ತಾಲ್ಲೂಕಿನಲ್ಲಿ ಸೋಲೂರು ಹೋಬಳಿಯಲ್ಲಿ ಮೂಗನಹಳ್ಳಿ ಎಂದು ಇದೆ. ಇಲ್ಲಿ 1994ರಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಬಾವಿಗೆ ಇದುವರೆಗೂ ಕರೆಂಟ್ ಕೊಡಿಸಿಲ್ಲ.

ಅಧ್ಯಕ್ಷರು: ಗ್ರೇ ಮತ್ತು ಡಾರ್ಕ್ ಏರಿಯಾಗಳ ಬಗ್ಗೆ ಬಹಳ ಮಾನ್ಯ ಸದಸ್ಯರುಗಳು ತೆಗೆದು ಹಾಕಬೇಕೆಂದು ಸೂಚಿಸಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಅದನ್ನು ತೆಗೆದು ಹಾಕತಕ್ಕಂಥ ಪ್ರಯತ್ನ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರಾದ ಶ್ರೀ ಅಂಜನಾಮೂರ್ತಿ ಹೇಳಿರುವ ವಿಷಯದ ಬಗ್ಗೆ ಏವರ ಕಳುಹಿಸಿಕೊಟ್ಟರೆ ಏನು ಕಾರಣ ಎಂಬುದನ್ನು ತಿಳಿಸುತ್ತೇನೆ. ಇನ್ನು ಸೋಮಶೇಖರ್‌ರವರ ಪ್ರಶ್ನೆಗೆ ಉತ್ತರಿಸಬಯಸುತ್ತೇನೆ. ಕೆ.ಪಿ.ಟಿ.ಸಿ.ಎಲ್.ರವರು ವಿಶೇಷ ಘಟಕ ಯೋಜನೆಯ ಹಣವೇನಿದೆ ಆ ಹಣದಲ್ಲಿಯೇ ವಿದ್ಯುತ್ ಸಂಪರ್ಕವನ್ನು ಕೊಡುತ್ತಿದ್ದಾರೆ. ಆ ಹಣ ಖರ್ಚಾಗುವವರೆಗೂ ಅವರೇ ವಿದ್ಯುತ್ ಸಂಪರ್ಕವನ್ನು ಕೊಡಬೇಕಾದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ನಾವೇನೂ ಹಣವನ್ನು ಅಡ್ವಾನ್ಸ್ ಆಗಿ ತುಂಬಬೇಕಾದ ಅಗತ್ಯವಿಲ್ಲ. ಆದುದರಿಂದ ವಿಶೇಷ ಘಟಕ ಯೋಜನೆಯ ಹಣವನ್ನು ನಾವು ಪೂಲ್ ಮಾಡುತ್ತಿಲ್ಲ. ಭಾಗ್ಯಜ್ಯೋತಿ ಹಾಗೂ ಗಂಗಾಕಲ್ಯಾಣ ಯೋಜನೆಗಳಿಗೆ ಕೆ.ಪಿ.ಟಿ.ಸಿ.ಎಲ್. ಹಣವನ್ನು ಕೊಡುತ್ತಿರುವುದೇನಿದೆ ಅದನ್ನು ಪೂಲ್ ಮಾಡುವ ವ್ಯಾಪ್ತಿಗೆ ನಾವು ತರುತ್ತಿಲ್ಲ. ಅವರು ವಿದ್ಯುತ್ ಸಂಪರ್ಕ ಕೊಡುತ್ತಿದ್ದಾರೆ. ಇದುವರೆಗೂ ನಮಗೆ ತೊಂದರೆಯಾಗಿಲ್ಲ. ಹಿಂದೆ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೇ ಈ ರೀತಿಯ ತೀರ್ಮಾನ ಮಾಡಿ ಆ ಪ್ರಕಾರ ನಡೆದುಕೊಂಡು ಹೋಗುತ್ತಿದೆ. ಆದರೆ ಸ್ವಲ್ಪ ಬ್ಯಾಕ್‌ಲಾಗ್ ಇತ್ತು. ಕಳೆದ ಒಂದು ವರ್ಷದಲ್ಲಿ ಇದನ್ನು ರೆಡ್ಯೂಸ್ ಮಾಡಿಕೊಳ್ಳುತ್ತಾ ಬಂದು ಈಗ ಒಂದು ಅಥವಾ ಒಂದೂವರೆ ಸಾವಿರ ಉಳಿದುಕೊಂಡಿರಬಹುದು. ಇನ್ನು ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಇನ್‌ಕ್ರೀಸ್ ಮಾಡುವ ಬಗ್ಗೆ ಕೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ವಿಶ್ವಬ್ಯಾಂಕ್‌ನಿಂದೇನಾದರೂ ಅಸಿಸ್ಟೆನ್ಸ್ ತೆಗೆದುಕೊಂಡರೆ ಆಗ ಒಂದು ಲಕ್ಷ ಅಥವಾ ಐವತ್ತು ಸಾವಿರ ಬೋರ್‌ವೆಲ್‌ನ್ನು ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆಯಬೇಕೆನ್ನುವ ಆಲೋಚನೆ ನಮಗೂ ಕೂಡ ಇದೆ. ಅದಕ್ಕೋಸ್ಕರ ಒಂದು

ಕಾರ್ಯಕ್ರಮವನ್ನು ರೂಪಿಸುತ್ತೇವೆ. ಅದನ್ನು ಏಶ್ಯಬ್ಯಾಂಕ್‌ಗೆ ಪ್ರೊಜೆಕ್ಟ್ ಮಾಡಬೇಕೆನ್ನುವ ಆಲೋಚನೆ ಕೂಡ ಇದೆ.

ಅಧ್ಯಕ್ಷರು: ನನ್ನದೂ ಒಂದು ಸಲಹೆ ಇದೆ. ಅದೇನೆಂದರೆ ಎಲ್ಲೆಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಸಂಖ್ಯೆ ಜಾಸ್ತಿ ಇದೆ ಅಲ್ಲಿ ಹೆಚ್ಚು ಬೋರ್‌ವೆಲ್‌ಗಳನ್ನು ಕೊಡಬೇಕು. ಉದಾಹರಣೆಗೆ ಹೇಳಬೇಕೆಂದರೆ ಉತ್ತರ ಕನ್ನಡದಲ್ಲಿ ಇವರ ಸಂಖ್ಯೆ ಎಂಟು ಪರ್ಸೆಂಟ್ ಇದ್ದರೆ ಹಾಸನ ಮತ್ತು ಮಂಡ್ಯ ಜಿಲ್ಲೆಯಲ್ಲಿ ಹತ್ತು ಪರ್ಸೆಂಟ್ ಇದೆ. ಆದರೆ ಕೋಲಾರ, ಗುಲ್ಬರ್ಗಾ ಮತ್ತು ಮೈಸೂರು ಜಿಲ್ಲೆಗಳಲ್ಲಿ ಇವರ ಸಂಖ್ಯೆ 36 ಪರ್ಸೆಂಟ್ ಇದೆ. ಕಡಿಮೆ ಜನಸಂಖ್ಯೆ ಇರುವ ಕಡೆಯೂ 20 ಬೋರ್‌ವೆಲ್ ಮತ್ತು ಹೆಚ್ಚು ಜನಸಂಖ್ಯೆ ಇರುವ ಕಡೆಗೂ 20 ಬೋರ್‌ವೆಲ್ ಕೊರೆಯುತ್ತೇವೆಂದರೆ ಯಾವ ನ್ಯಾಯ ಹೇಳಿ? ಆದುದರಿಂದ ಎಲ್ಲೆಲ್ಲಿ ಪರಿಶಿಷ್ಟ ಜಾತಿ: ವರ್ಗದ ಜನಸಂಖ್ಯೆ ಹೆಚ್ಚು ಇರುತ್ತಾರೆ ಅಲ್ಲಿಗೆ ಹೆಚ್ಚು ಸಂಖ್ಯೆ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿಯವರು ಹೆಚ್ಚು ಇರುವ ಕಡೆ ಹೆಚ್ಚು ಬೋರ್‌ವೆಲ್ ಕೊರೆಸಲು ಪ್ರಯತ್ನ ಮಾಡುತ್ತೇನೆ. ಇನ್ನು ಡಾರ್ಕ್ ಏರಿಯಾ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಹಿಂದೆ ಇದ್ದ ನಿಬಂಧನೆಯನ್ನು ಈಗ ಕೆ.ಪಿ.ಟಿ.ಸಿ.ಎಲ್ ತೆಗೆದು ಹಾಕಿದೆ ಎಂಬ ವಿಷಯವನ್ನು ಸದನದಲ್ಲಿ ತಿಳಿಸಬಯಸುತ್ತೇನೆ.

ಅಂಕೋಲ, ಸಿರ್ಸಿ, ಯಲ್ಲಾಪುರ ತಾಲ್ಲೂಕಿನಲ್ಲಿ ಹಾಸ್ಟೆಲ್‌ಗಳ ಮಂಜೂರಾತಿ.

219(2626)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1999-2000, 2000-01ನೇ ಸಾಲಿನಲ್ಲಿ ಮೆಟ್ರಿಕ್-ಪೂರ್ವ, ಮೆಟ್ರಿಕ್ ನಂತರದ ಹಾಸ್ಟೆಲ್ ಎಷ್ಟು ಮಂಜೂರಾತಿಯಾಗಿವೆ; ಎಲ್ಲೆಲ್ಲಿ; (ವಿವರ ಒದಗಿಸುವುದು)

2) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಸ್ತಾವನೆ ಸರ್ಕಾರಕ್ಕೆ ಬಂದಿವೆ; (ವಿವರ ಒದಗಿಸುವುದು)?

3) ಅಂಕೋಲಾ; ಸಿರ್ಸಿ; ಯಲ್ಲಾಪುರ ತಾಲ್ಲೂಕಿನ ನಗರ ಗ್ರಾಮಾಂತರದಲ್ಲಿ ಮೆಟ್ರಿಕ್-ಪೂರ್ವ ವಸತಿನಿಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?